

ಗೀತಾ: ನಿನ್ನೆ ನಿನಗಾಗಿ ನಾನು ರಾಖಿ ತಂದಿದ್ದೆ; ನೀನೇಕೆ ಕಟ್ಟಿಸಿಕೊಳ್ಳಲಿಲ್ಲ?

ರಾಮು: ನೀನೊಳ್ಳೇ... ಮಾತಾಡ್ತೀ... ನಾಳೆ ನಿನಗಾಗಿ ನಾನೊಂದು 'ಮಂಗಳ ಸೂತ್ರ' ತಂದರೆ ನೀನು ಕಟ್ಟಿಸಿಕೊಳ್ಳುವೆಯಾ?

★★★

## ಸುಳ್ಳು ನುಡಿಯುವುದೆಂದರೆ...

ಚಿಕ್ಕ ಹುಡುಗನಿಗೆ ಒಂದು 'ತಪ್ಪು',
ಪ್ರೇಮಿಗೆ ಒಂದು 'ಕಲೆ',
ಬ್ರಹ್ಮಚಾರಿಗೆ 'ಪಾಂಡಿತ್ಯ' ಮತ್ತು ವಿವಾಹಿತನಿಗೆ 'ಬದುಕುವ ದಾರಿ'!

★★★

ಮಗ ನೈಟ್ ಕ್ಲಬ್‌ಗೆ ಹೋದಾಗ ಸಿಟ್ಟಿಗೆದ್ದ ಅಮ್ಮ ಪ್ರಶ್ನಿಸಿದಳು, 'ನೋಡಬಾರದ್ದೇನನ್ನೂ ನೀನಲ್ಲಿ ನೋಡಿಲ್ಲ ತಾನೆ, ನಿಜ ಹೇಳು?'

ಮಗ: ನೋಡಿ ಬಿಟ್ಟೆ ಅಮ್ಮ.

ತಾಯಿ: ಹಾಂ... ಏನು ನೋಡಿದೆಯೋ ಮಾರಾಯಾ...?

ಮಗ: ಅಪ್ಪನನ್ನು ಕಂಡೆನಮ್ಮಾ...!!

(ಸಂ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ

---

## ಬೇಡ.. ಬೇಡ..!

'ಅರೆ ಏನಿದು? ನಿನ್ನ ಅಂಗಿ ಪ್ಯಾಂಟು ಹರಿದಿವೆ. ತಲೆಯಲ್ಲಿ ಗಾಯ ಕೂಡಾ ಆಗಿದೆ. ಕೈಯಲ್ಲಿ ರಕ್ತದ ಕಲೆ ಇದೆ. ನಡೆ, ನಿನ್ನನ್ನು ನಿನ್ನ ಮನೆಗೆ ತಲಪಿಸುತ್ತೇನೆ' ಶಿಂಗನ ಅವಸ್ಥೆಯನ್ನು ಕಂಡು ಶೀನಿ ಅಂದ.

'ಬೇಡ ಬೇಡ. ನಾನೀಗ ಮನೆಯಿಂದಲೇ ಬರುತ್ತಿರುವುದು' ಶಿಂಗ ಅಳುತ್ತಾ ನುಡಿದ.

★★★



## ವಯಸ್ಸೆಷ್ಟು?

ಶಿಕ್ಷಕ: 1960ನೇ ಇಸವಿಯಲ್ಲಿ ಹುಟ್ಟಿದ ಒಬ್ಬ ವ್ಯಕ್ತಿಯ ವಯಸ್ಸು ಈಗ ಎಷ್ಟು ವರ್ಷಗಳಾಗುತ್ತಿದೆ?

ಶಿಂಗ: ಆ ವ್ಯಕ್ತಿ ಗಂಡೋ ಹೆಣ್ಣೋ?

★★★

## ಮಲಗುವುದಿಲ್ಲ

'ನನ್ನ ಪತ್ನಿ ಪ್ರತಿ ದಿನ ರಾತ್ರಿ ಮೂರು ಗಂಟೆಯ ತನಕ ಮಲಗುವುದೇ ಇಲ್ಲ.'

'ಹೌದೇ? ಅಷ್ಟು ರಾತ್ರಿ ತನಕ ಅವಳು ಏನು ಮಾಡುತ್ತಿರುತ್ತಾಳೆ.'

'ನಾನು ಮನೆಗೆ ಬರುವುದನ್ನೇ ಕಾಯುತ್ತಿರುತ್ತಾಳೆ.'

(ಸಂ) ಸೋಮನಾಥ. ಎಸ್. ಕರ್ಕೇರ


ಪ್ರಸಿದ್ಧ ಬಂಗಾಳಿ ಜ್ಯೋತಿಷ್ಯರು



(ಬಿಲ್ವಮಂಗಳ ಅಘೋರಿ ನಾಗಸಾಧು)

ಸತತವಾಗಿ 21 ವರ್ಷಗಳಿಂದ ಯಂತ್ರಮಂತ್ರಗಳನ್ನು ಸಿದ್ಧಿಮಾಡಿಕೊಂಡಿರುವ ಯೋಗಿ

ಶ್ರೀ ಹೆಚ್. ಮಾರುತಿರಾವ್ ಶಾಸ್ತ್ರಿ

ಅಥರ್ವಣವೇದದ ಸ್ಥಂಭನ, ಮೋಹನ, ವಿದ್ವೇಷಣ, ಉಚ್ಚಾಟಣ ತಂತ್ರಗಳಿಂದ ಹಸ್ತರೇಖೆ, ಜಾತಕ ಫೋಟೋ ನೋಡಿ ವಿದ್ಯೆ, ಆರೋಗ್ಯ, ಉದ್ಯೋಗ, ವ್ಯಾಪಾರ, ದಾಂಪತ್ಯ, ವಶೀಕರಣ, ಸಂತಾನಪ್ರಾಪ್ತಿ, ಸಾಲಬಾಧೆ, ಶತ್ರುಕಾಟ, ಕೋರ್ಟ್ ಕಲಹ, ವಿದೇಶ ಪ್ರಯಾಣ, ನಿಮ್ಮ ಇನ್ನಿತರ ಯಾವುದೇ ರೀತಿಯ ಕಠಿಣ ಹಾಗೂ ಗುಪ್ತ ಸಮಸ್ಯೆಗಳಿಗೂ ಶೀಘ್ರದಲ್ಲಿ ಪರಿಹಾರ.

ಇಲ್ಲಿ ಕೇಳುವ ವಿಚಾರಗಳನ್ನು ಗುಪ್ತವಾಗಿರಿಸಲಾಗುವುದು. ಫೋನಿನಲ್ಲಿ ನಿಮ್ಮ ಸಮಸ್ಯೆಗಳಿಗೆ ಶೀಘ್ರ ಪರಿಹಾರ ನೀಡುವರು

ವಿಳಾಸ: ನಂ. 13/14, ಕೆಂಪೇಗೌಡ ಕಮರ್ಷಿಯಲ್ ಆರ್ಕೇಡ್, ಶ್ರೀ ವಿಷ್ಣುಭವನ ಹೋಟೆಲ್ ಹಿಂಭಾಗ, ಸಾಗರ್ ಥಿಯೇಟರ್ ಮುಂಭಾಗ, ಕೆ.ಜಿ.ರಸ್ತೆ, ಮೆಜೆಸ್ಟಿಕ್, ಬೆಂಗಳೂರು.

9880524980
9632305982